ಕರ್ನಾಟಕ ವಿಧಾನ ಸಭೆ

ಬುಧವಾರ 10ನೇ ಸೆಪ್ಟೆಂಬರ್ 1997ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಪೀಠವನ್ನು ಅಲಂಕರಿಸಿದ್ದರು.

1. ಸಭೆಯ ಮುಂದಿಡಲಾದ ಕಾಗದಪತ್ರಗಳು

I. ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿ): ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 262(3)ನೇ ಪ್ರಕರಣದ ಮೇರೆಗೆ;

1) 1994-95ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ಪ್ರಮಾಣೀಕೃತ ವಾರ್ಷಿಕ ಲೆಕ್ಕಗಳು;

2) 1994-95ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಗಳ ಮೇಲಿನ ಲೆಕ್ಕಪರಿಶೋಧನಾ ವರದಿ;

3) 1994-95ನೇ ಸಾಲಿನ ರಾಯಚೂರು ಜಿಲ್ಲಾ ಪಂಚಾಯತ್‌ನ ಪ್ರಮಾಣೀಕೃತ ವಾರ್ಷಿಕ ಲೆಕ್ಕಗಳು ಹಾಗೂ ಲೆಕ್ಕಗಳ ಮೇಲಿನ ಲೆಕ್ಕಪರಿಶೋಧನಾ ವರದಿ;

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

4) 1992-93 ಹಾಗೂ 1993-94ನೇ ಸಾಲುಗಳ ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ 19 ಹಾಗೂ 20ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

II. ಶ್ರೀ ಎಸ್.ಎಸ್.ಪಾಟೀಲ್ (ಸಹಕಾರಿ ಮಂತ್ರಿ)ರವರ ಪರವಾಗಿ,

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ,

1962ರ ಉಗ್ರಾಣ ನಿಗಮದ ಕಾಯ್ದೆಯ 31 (11)ನೇ ಪ್ರಕರಣದ ಮೇರೆಗೆ;

1995-96ನೇ ಸಾಲಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 38ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರವನ್ನು ಮಂಡಿಸುತ್ತೇವೆ.